1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 18.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 28 ಪಿ. ಡಬ್ಲ್ಯೂ:19

| | |
|---|---|
| ಸಾಕ್ಷಿದಾರರ ಹೆಸರು | ನಿಂಗರಾಜು |
| ತಂದೆಯ ಹೆಸರು | ಲೇಟ್ ರಾಚಯ್ಯ |
| ವಯಸ್ಸು | 42 ವರ್ಷ |
| ಉದ್ಯೋಗ | ಮುಖ್ಯ ಪೇದೆ, ಬೆಳಕವಾಡಿ ಪೊಲೀಸ್ ಠಾಣೆ. |
| ವಾಸ | ಬೆಳಕವಾಡಿ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 28.06.2021 ರಿಂದ ನಾನು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 04.08.2022 ರಂದು ಚಾಸಾ. 29 ರವರು, ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳಿಂದ ಗಾಯಾಳುಗಳಾದ ಸಿದ್ದರಾಜು ಮತ್ತು ಮಹದೇವಮ್ಮ ರವರು ದಾಖಲಾಗಿದ್ದಾರೆಂದು ಮೆಮೋ ಬಂದಿದೆ ಎಂದು ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ನನ್ನನ್ನು ಅವರೊಂದಿಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.
3. ಅದೇ ದಿನ, ಸದರಿ ಆಸ್ಪತ್ರೆಯ ಸುಟ್ಟಗಾಯಗಳ ವಾರ್ಡಿನಲ್ಲಿ ದಾಖಲಾಗಿದ್ದ ಸಿದ್ದರಾಜು ಮತ್ತು ಮಹದೇವಮ್ಮ ರವರ ಹೇಳಿಕೆಗಳನ್ನು ಚಾಸಾ.29 ರವರು ದಾಖಲು ಮಾಡಿಕೊಂಡಿರುತ್ತಾರೆ. ಸದರಿ ಹೇಳಿಕೆಗಳನ್ನು ನಾನು ಬರೆದಿರುತ್ತೇನೆ. ಸದರಿ ಹೇಳಿಕೆ ಗಳನ್ನು ವೈದ್ಯರ ಸಮಕ್ಷಮದಲ್ಲಿ ಪಡೆಯಲಾಗಿದೆ.
4. ಸದರಿ ಹೇಳಿಕೆಗಳನ್ನು ಪಡೆದುಕೊಂಡ ನಂತರ ಚಾಸಾ. 29 ರವರು ಮತ್ತು ನಾನು ಪೊಲೀಸ್ ಠಾಣೆಗೆ ವಾಪಸ್ಸು ಆಗಿದ್ದು, ಸದರಿ ಹೇಳಿಕೆಗಳನ್ನು ಚಾಸಾ. 29 ರವರು, ಚಾಸಾ. 30 ರವರಿಗೆ ಮುಂದಿನ ಕ್ರಮಕ್ಕಾಗಿ ನೀಡಿರುತ್ತಾರೆ.
5. ಚಾಸಾ.30 ರವರು ಅದೇ ದಿನ ಸಂಜೆ 4.00 ಗಂಟೆ ಸಮಯದಲ್ಲಿ ಈ ಪ್ರಕರಣದ ಸಂಬಂಧದಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ. ನಂತರ ಕೃತ್ಯ ನಡೆದ ಸ್ಥಳದಲ್ಲಿ

ಮಹಜರ್ ಕ್ರಮ ಜರುಗಿಸುವ ಸಲುವಾಗಿ ಚಾಸಾ. 30 ರವರು ನನ್ನನ್ನು ಅವರ ಜೊತೆ ಕೃತ್ಯ ನಡೆದ ಸ್ಥಳವಾದ ನೆಟ್ಟಕಲ್ಲು ಗ್ರಾಮದಲ್ಲಿ ಇರುವ ಆರೋಪಿ ಸಿದ್ದೇಗೌಡರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಮನೆಯಲ್ಲಿ ಪಂಚರ ಸಮಕ್ಷಮದಲ್ಲಿ ಚಾಸಾ.30 ರವರು ಸಂಜೆ 4.40 ರಿಂದ 5.40 ಗಂಟೆ ತನಕ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆಗ ಸದರಿ ಮಹಜರ್ ಕ್ರಮಗಳನ್ನು ಚಾಸಾ.30 ರವರು ಹೇಳಿದಂತೆ ನಾನು ಬರೆದಿರುತ್ತೇನೆ ಹಾಗೂ ನಾನು ಸದರಿ ಮಹಜರ್ ಗೆ ಸಹಿ ಮಾಡಿರುತ್ತೇನೆ.

6. ಸಾಕ್ಷಿಗೆ ನಿಪಿ.6 ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ.6(ಸಿ) ಎಂದು ಗುರುತಿಸಲಾಯಿತು.

7. ಸಾಕ್ಷಿಯು ಸಿದ್ದರಾಜು ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಸಾಕ್ಷಿಯು ಮೃತೆ ಮಹದೇವಮ್ಮ ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ.43 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ</u>**

8. ಸದರಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಗಾಯಾಳುಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ಹೋಗುವ ಸಲುವಾಗಿ ಲಿಖಿತ ಸೂಚನಾ ಪತ್ರವನ್ನು ನೀಡಿಲ್ಲ. ಬೆಳಗ್ಗೆ 8.00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ.29 ರವರು ಪೊಲೀಸ್ ಠಾಣೆಯನ್ನು ಬಿಟ್ಟು, ಮೈಸೂರಿನ ಕೆ ಆರ್ ಆಸ್ಪತ್ರೆಗೆ ಬೆಳಗ್ಗೆ 11.30 ಗಂಟೆಗೆ ತಲುಪಿದ್ದೆವು. ಸದರಿ ಗಾಯಾಳುಗಳು ಇದ್ದ ವಾರ್ಡಿನ ನಂಬರ್ ಗಳು ಗೊತ್ತಾ ಎಂದರೆ ಸಾಕ್ಷಿಯು, ಸದರಿ ವಾರ್ಡ್, ಸುಟ್ಟ ಗಾಯಗಳ ವಾರ್ಡ್ ಎಂದು ಉತ್ತರಿಸಿರುತ್ತಾರೆ. ಸದರಿ ಸಿದ್ದರಾಜು ರವರು ಇದ್ದ ವಾರ್ಡಿನ ನಂಬರ್ ಗೊತ್ತಿಲ್ಲ. ಸದರಿ ಗಾಯಾಳುಗಳನ್ನು ನೋಡಿಕೊಳ್ಳಲು, ಅವರ ಸಂಬಂಧಿಕರು ಅಂದರೆ, ಮಹದೇವಮ್ಮ ರವರ ಮಗಳು ಮಹದೇವಮ್ಮ ರವರು ಆಸ್ಪತ್ರೆಯಲ್ಲಿ ಇದ್ದರು. ಸದರಿ ಸಮಯದಲ್ಲಿ ಡ್ಯೂಟಿ ವೈದ್ಯರಾದ ಡಾ. ವಿಜಯ್ ಕುಮಾರ್ ರವರು ಇದ್ದರು. ಗಾಯಾಳುವಿನ ಹೇಳಿಕೆಯನ್ನು ಪಡೆಯಲು ಸದರಿ ವೈದ್ಯರಿಗೆ ಅನುಮತಿ ಪತ್ರವನ್ನು ಚಾಸಾ. 29 ರವರು ನೀಡಿರುತ್ತಾರೆ.

9. ಸಿದ್ದರಾಜು ರವರ ಹೇಳಿಕೆಯನ್ನು ಮಧ್ಯಾಹ್ನ 12 ರಿಂದ 1.00 ಗಂಟೆ ತನಕ ಪಡೆಯಲಾಗಿತ್ತು. ಚಾಸಾ. 29 ರವರು ಎಷ್ಟು ಪ್ರಶ್ನೆಗಳನ್ನು ಗಾಯಾಳುಗಳಿಗೆ ಹಾಕಿದ್ದರು ಹಾಗೂ ಅವರು ಎಷ್ಟು ಪ್ರಶ್ನೆಗಳಿಗೆ ಉತ್ತರಿಸಿದ್ದರು ಎಂದರೆ ಸಾಕ್ಷಿಯು, ಚಾಸಾ.29 ರವರು ವಿಚಾರಣೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಪ್ರಶ್ನೋತ್ತರ ರೀತಿಯಲ್ಲಿ ಸದರಿ ಸಿದ್ದರಾಜು ರವರು ಹೇಳಿಕೆಯನ್ನು ಪಡೆದುಕೊಂಡಿಲ್ಲ.

10. ಚಾಸಾ. 29 ರವರು ಹೇಳಿದಂತೆ ನಾನು ಸಿದ್ದರಾಜು ರವರ ಹೇಳಿಕೆಯನ್ನು ಬರೆದಿರುತ್ತೇನೆ ಎಂದರೆ ಸರಿ. ಸದರಿ ಸಿದ್ದರಾಜುರವರ ಹೇಳಿಕೆಗೆ, ಮಹದೇವಮ್ಮ ರವರ ಮಗಳ ಸಹಿಯನ್ನು ಪಡೆದುಕೊಂಡಿಲ್ಲ. ಸಿದ್ದರಾಜುರವರ ಹೇಳಿಕೆಯನ್ನು ನಾವು ಆಸ್ಪತ್ರೆಯಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಸಿದ್ದರಾಜುರವರ ಹೇಳಿಕೆಯನ್ನು ಪೊಲೀಸ್ ಠಾಣೆಯಿಂದ ಬರೆದುಕೊಂಡು ಹೋಗಿ ಸಿದ್ದರಾಜು ರವರ ಸಹಿಯನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ.

11. ಮಹದೇವಮ್ಮ ರವರು ಕೆ.ಆರ್. ಆಸ್ಪತ್ರೆಯ ಮಹಿಳಾ ವಾರ್ಡಿನಲ್ಲಿ ದಾಖಲಾಗಿದ್ದರು. ಅಲ್ಲಿ ಒಬ್ಬರೇ ದಾಖಲಾಗಿದ್ದರು. ಸದರಿ ಮಹದೇವಮ್ಮ ರವರ ಹೇಳಿಕೆಯನ್ನು ದಾಖಲಸಿಕೊಳ್ಳುವ ಸಮಯದಲ್ಲಿ ಅವರ ಸಂಬಂಧಿಕರಾದ ಮಹದೇವಮ್ಮ ರವರು ಸದರಿ ವಾರ್ಡಿನ ಹೊರಗಡೆ ಇದ್ದರು. ಸದರಿ ಮೃತ ಮಹದೇವಮ್ಮ ಹೇಳಿಕೆಯನ್ನು ಮಧ್ಯಾಹ್ನ 1.15 ರಿಂದ 2.15 ಗಂಟೆಯ ತನಕ ಪಡೆದುಕೊಂಡಿರುತ್ತೇವೆ. ಸದರಿ ಮಹದೇವಮ್ಮ ರ ಹೇಳಿಕೆಯನ್ನು ಪ್ರಶ್ನೋತ್ತರ ರೀತಿಯಲ್ಲಿ ಬರೆದುಕೊಂಡಿಲ್ಲ. ಚಾಸಾ.29 ರವರು ಹೇಳಿದ್ದರ ಮೇರೆಗೆ ನಾನು ಸದರಿ ಮೃತ ಮಹದೇವಮ್ಮ ಹೇಳಿಕೆಯನ್ನು ಬರೆದಿರುತ್ತೇನೆ ಎಂದರೆ ಸಾಕ್ಷಿಯು, ಸದರಿ ಮೃತ ಮಹದೇವಮ್ಮರವರನ್ನು ಕೇಳಿ ಚಾಸಾ.29 ರವರು ಹೇಳಿದುದ್ದನ್ನು ನಾನು ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೃತೆ ಮಹದೇವಮ್ಮ ರವರ ಹೇಳಿಕೆಗೆ ಅವರ ಸಂಬಂಧಿಕರ ಸಹಿಯನ್ನು ಪಡೆದುಕೊಂಡಿಲ್ಲ. ಮೃತೆ ಮಹದೇವಮ್ಮ ರವರು ನಿಪಿ.43 ರಂತೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾವು ಪೊಲೀಸ್ ಠಾಣೆಯಿಂದ ಹೇಳಿಕೆಯನ್ನು ಬರೆದುಕೊಂಡು ಹೋಗಿ ಮಹದೇವಮ್ಮ ರವರ ಹೆಬ್ಬೆಟ್ಟಿನ ಗುರುತನ್ನು ಸಹಿಯನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ.

12. ಸ್ಥಳ ಪಂಚನಾಮೆಗೆ, ಪಂಚರಿಗೆ ಪೂರ್ವ ನೋಟಿಸನ್ನು ಚಾಸಾ.30 ರವರು ನೀಡಿದ್ದರು. ಸಾಕ್ಷದಾರರಾದ ಮಹದೇವಮ್ಮ ರವರು ಘಟನಾ ಸ್ಥಳವನ್ನು ತೋರಿಸಿದ್ದರು. ಮಹದೇವಮ್ಮ ರವರು ಸ್ಥಳವನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ನಿಪಿ. 6 ನ್ನು ತಯಾರಿಸಿ, ಠಾಣೆಯಲ್ಲಿಯೇ ಪಂಚರ ಸಹಿಯನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ.

ಆರೋಪಿಗೆ ಶಿಕ್ಷೆ ಕೊಡಿಸಬೇಕು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.